2. ವರದಿಯನ್ನೊಪ್ಪಿಸುವುದು

ವಿಷಯ: ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಒಪ್ಪಿಸುವುದು

ಅಧ್ಯಕ್ಷರು: ಮಾನ್ಯ ಕೆ.ಜಿ. ಬೋಪಯ್ಯನವರು ಖಾಸಗಿ ಸದಸ್ಯರುಗಳ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ವರದಿಯನ್ನು ಸದನಕ್ಕೆ ಒಪ್ಪಿಸ ಬೇಕಾಗಿತ್ತು. ಆದರೆ, ಅವರು ಇಲ್ಲದೇ ಇರುವುದರಿಂದ ಸದರಿ ವರದಿಯನ್ನು ಸದನದ ಮುಂದೆ ನಾನೇ ಮಂಡಿಸುತ್ತೇನೆ.

ಅಧ್ಯಕ್ಷರು: (ಉಪಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ, ಇವರ ಪರವಾಗಿ) ಖಾಸಗಿ ಸದಸ್ಯರುಗಳು ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ಒಪ್ಪಿಸಲಾಯಿತು.

3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ:

ವಿಷಯ: ಅರಣ್ಯ ಇಲಾಖೆಗೆ ಸೇರಿದ 250 ಎಕರೆ ಜಮೀನನ್ನು ಕೆಲವು ಪಟ್ಟ ಭದ್ರ ವ್ಯಕ್ತಿಗಳು ಕಬಳಿಸಿರುವುದರ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸಿಪುರ): ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ದಿವಸ ನಾನು ಬಹಳ ಪ್ರಮುಖವಾದಂಥ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯದ 5 ಕೋಟಿ ಕನ್ನಡಿಗರ ಆಸ್ತಿ ಬಗ್ಗೆ ಅಂದರೆ, ಅರಣ್ಯ ಇಲಾಖೆಗೆ ಸೇರಿದ 250 ಎಕರೆ ಜಮೀನನ್ನು ಕೆಲವು ಪಟ್ಟಭದ್ರ ವ್ಯಕ್ತಿಗಳು ಕಬಳಿಸಿರುವುದರ ಬಗ್ಗೆ ಪರಿಸರವಾದಿಗಳು, ಸಾಹಿತಿಗಳು, ಗಣ್ಯವ್ಯಕ್ತಿಗಳು ಮತ್ತು ಸಾರ್ವಜನಿಕರು ಪ್ರಬಲವಾಗಿ ವಿರೋಧಿಸುತ್ತಾ ಬಂದಿರತಕ್ಕಂಥ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ವಿಷಯ ಪ್ರಸ್ತಾಪ ಮಾಡುತ್ತಿರುವ ಹಿಂದೆ ಯಾವುದೇ ರಾಜಕೀಯ ವಿಷಯಗಳು ಇಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಇದರ ಬಗ್ಗೆ ಯಾರು ತಪ್ಪು ತಿಳಿದುಕೊಳ್ಳಬಾರದೆಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ಮತ್ತೆ ನಾಳೇ ದಿವಸ ರಾಜಕೀಯ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆಂದು ಹೇಳುವುದು ಬೇಡ. ಈ ಸದನದಲ್ಲಿರುವ 224 ಸದಸ್ಯರೆಲ್ಲರೂ ಒಟ್ಟಿಗೆ ಸೇರಿ ಅರಣ್ಯ ಒತ್ತುವರಿ ಇರಬಹುದು ಅಥವಾ ಅರಣ್ಯ ಪ್ರದೇಶ ಲೂಟಿ ಮಾಡುತ್ತಿರುವುದನ್ನು ನಾವೆಲ್ಲ